# ಕರ್ನಾಟಕ ಲೋಕಾಯುಕ್ತ

**ಕಂಪ್ಲೇಟ್/ಉಪಲೋಕ್/ಬಿಜಿಎಂ/1496/2021**
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 12-01-2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ ಮಲ್ಲಪ್ಪ ಸುಕಾಲಿ, ದ್ವಿತೀಯ ದರ್ಜೆ ಸಹಾಯಕ, ಕರ್ನಾಟಕ ಗೃಹ ಮಂಡಳಿ, ವಿಜಯಪುರ, – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

=====

1. ಪೋಲಿಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ವಿಜಯಪುರ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ ಮಲ್ಲಪ್ಪ ಸುಕಾಲಿ, ಬಿನ್ ಗುರುಮೂರ್ತಿ ಸುಕಾಲಿ, ದ್ವಿತೀಯ ದರ್ಜೆ ಸಹಾಯಕ, ಕರ್ನಾಟಕ ಗೃಹ ಮಂಡಳಿ, ವಿಜಯಪುರ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಆದ ನೀವು ದೂರುದಾರರಾದ **ಶ್ರೀ ಮಹ್ಮದ್‌ಸಾಧಿಕ ತಂದೆ ಶೌಕತ್‌ಆಲಿ, ಶಿರಸಂಗಿ, ಜಮಖಂಡಿ, ದರ್ಗಾ ಕಾಲನಿ. ಮೈಗೂರ ರೋಡ್, ಜಮಖಂಡಿ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರ ವಿರುದ್ಧ ದೂರು ಸಲ್ಲಿಸಿದ್ದು, ಸದರಿ ದೂರು ಮೊಕದ್ದಮೆ ಸಂ:06/2017ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆ ಪೂರೈಸಿ, ಲಂಚ ಪ್ರತಿಬಂಧಕ ಕಾಯ್ದೆ 1988, ಕಲಂ 7, 13(1), ಸ/ವಾ. 13(2) ಅಡಿಯಲ್ಲಿ ದೋಷರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 2 ಲಕ್ಷ ರೂ. ಲಂಚ ಪಡೆದು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(1) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2). ದೂರುದಾರರು ಎದುರುದಾರರ ವಿರುದ್ಧ ದೂರು ಸಲ್ಲಿಸಿದ್ದು, ದೂರಿನಲ್ಲಿ ದಿನಾಂಕ: 16-08-2016 ಕರ್ನಾಟಕ ಗೃಹ ಮಂಡಳಿ, ಬೆಂಗಳೂರು, ಇವರು ವಿಜಯಪುರ ಜಿಲ್ಲೆ, ಇಟ್ಟಂಗಿ ಹಾಳದಲ್ಲಿ, ಸಾರ್ವಜನಿಕ ನಿವೇಶನ ಹಂಚಿಕೆ ಕುರಿತು ಪ್ರಕಟಣೆ ಹೊರಡಿಸಿದ್ದು, ಇದರನ್ವಯ ದೂರುದಾರರು ಹಾಗೂ ಅವರ ಪತ್ನಿ ಸಾಹೀದಾಬಾನು ಹಾಗೂ ದೂರುದಾರರ ಪತ್ನಿ ಅಕ್ಕ ಶ್ರೀಮತಿ ನೂರಜಹಾನ ಎಲ್ಲರೂ ದಿನಾಂಕ: 28-09-2016 ರಂದು ಕಾರ್ಪೋರೇಶನ್ ಬ್ಯಾಂಕ್, ವಿಜಯಪುರದಲ್ಲಿ ನಗದು ಹಣವನ್ನು, ಕರ್ನಾಟಕ ಗೃಹ ಮಂಡಳಿ, ಅರ್ಜಿ ಸಂಖ್ಯೆ: 81364, 81362, 81363 ರನ್ವಯ ಜಮಾ ಮಾಡಿರುತ್ತಾರೆ. ದಿನಾಂಕ: 11-04-2017 ರಂದು ದೂರುದಾರರು ಅವರ ಸ್ನೇಹಿತರೊಂದಿಗೆ ಎದುರುದಾರರನ್ನು ಕಚೇರಿಯಲ್ಲಿ ಭೇಟಿ ಮಾಡಿದಾಗ, ಎದುರುದಾರರು ತಲಾ ಒಂದು ನಿವೇಶನಕ್ಕೆ ಒಂದು ಲಕ್ಷ ರೂ. ನಂತೆ ಮೂರು ನಿವೇಶನಗಳಿಗೆ ರೂ. ಮೂರು ಲಕ್ಷ ಲಂಚದ ಹಣವನ್ನು ಕೇಳಿದ್ದು, ಅದರಲ್ಲಿ ಮುಂಗಡವಾಗಿ ರೂ. ಎರಡು ಲಕ್ಷ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ. ದಿನಾಂಕ: 13-04-2017 ರಂದು ದೂರುದಾರರು ಲಂಚದ ಹಣವನ್ನು ಹೊಂದಿಸಿಕೊಂಡು, ತನ್ನ ಹಾಗೂ ತನ್ನ ಪತ್ನಿ ಹಾಗೂ ಪತ್ನಿಯ ಅಕ್ಕನ ಪರವಾಗಿ, ಪೋಲಿಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ವಿಜಯಪುರ, ಇವರ ಮುಂದೆ ಹಾಜರಾಗಿ, ಎದುರುದಾರರ ವಿರುದ್ದ ದೂರು ನೀಡಿರುತ್ತಾರೆ. ಅದರಂತೆ, ತನಿಖಾಧಿಕಾರಿಯವರು ಸದರಿ ಮೊಕದಮೆ ಸಂಖ್ಯೆ: 06/2017ರ ಪಿಸಿ ಕಾಯಿದೆ 1988 ಕಲಂ 7ರ ನ್ವಯ ಪ್ರ.ವ. ವರದಿ ದಾಖಲು ಮಾಡಿರುತ್ತಾರೆ.

3). ದಿನಾಂಕ: 13-04-2017, ತನಿಖಾಧಿಕಾರಿಯವರು ಪಂಚರುಗಳಾದ ಬಾಬು ಪಂಚ-1, ನೂರ್‌ಜಹಾನ್ ಬೇಗಂ ಪಂಚ-2, ರವರುಗಳನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ದೂರಿನ ವಿಚಾರವನ್ನು ತಿಳಿಸಿಕೊಟ್ಟಿರುತ್ತಾರೆ. ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 2 ಲಕ್ಷ ರೂ.ಗಳನ್ನು ಹಾಜರುಪಡಿಸಿದಾಗ, ಪಂಚ-1, 2, ಇವರುಗಳು ಸದರಿ ಹಣವನ್ನು ಪರಿಶೀಲಿಸಿ ಪಂಚ-2 ರವರು ಹೇಳಿದ ಪ್ರಕಾರ ಪಂಚ-1 ರವರು ಒಂದು ಬಿಳಿ ಹಾಳೆಯಲ್ಲಿ ನೋಟುಗಳ ಮುಖ ಬೆಲೆ ಹಾಗೂ ನಂಬರುಗಳನ್ನು ಬರೆದಿರುತ್ತಾರೆ. ನಂತರ ಸದರಿ ನೋಟುಗಳಿಗೆ ಪೋಲೀಸ್ ಸಿಬ್ಬಂದಿ ಫಿನಾಪ್ತಿಲಿನ್ ಪೌಡರ್ ಲೇಪಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚ-1 ರವರು ಸದರಿ ನೋಟುಗಳನ್ನು ಎಣಿಸಿ ದೂರುದಾರರ ಬಲ ಪ್ಯಾಂಟಿನ ಜೇಬಿನಲ್ಲಿ ಇಟ್ಟಿರುತ್ತಾರೆ.

ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಪಡೆದ ನಂತರ, ದೂರುದಾರರು ತನ್ನ ಗಾಗಲ್ ತೆಗೆದು ಕರವಸ್ತ್ರದಿಂದ ಒರೆಸುವಂತೆ ಸೂಚನೆ ನೀಡಬೇಕೆಂದು ಸೂಚಿಸಿರುತ್ತಾರೆ. ನಂತರ ದೂರುದಾರರು ಎದುರುದಾರರನ್ನು ಭೇಟಿ ಮಾಡಿದಾಗ, ಸಂಭಾಷಣೆಯನ್ನು ತನ್ನ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಳ್ಳುವಂತೆ ಸೂಚಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿಯವರು ಛಾಯ ಚಿತ್ರಗಳನ್ನು ತೆಗೆದು ಪಂಚರ ಸಮಕ್ಷಮ ವಹಿಸಿಕೊಡುವ. ಪಂಚನಾಮೆ ದಿ: 13-04-2017 ರಂದು ಬೆ: 9.45 ರಿಂದ ಮ: 12.30 ರವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

4). ಅದೇ ದಿನ, ದಿನಾಂಕ: 13/4/2017 ರಂದು ದೂರುದಾರರು ಹಾಗೂ ಅವರ ಸ್ನೇಹಿತ ಹಾಗೂ ಪಂಚ-1 (ನೆರಳು ಸಾಕ್ಷಿ) ಇವರುಗಳು ಕರ್ನಾಟಕ ಗೃಹ ಮಂಡಳಿ, ಕಚೇರಿಗೆ ಬರುವಷ್ಟರಲ್ಲಿ ಎದುರುದಾರರು ದೂರುದಾರರನ್ನು ಹಾಗೂ ಇತರರನ್ನು ವಾತ್ಸಲ್ಯ ದವಾಖಾನೆ ಕ್ರಾಸ್ ಹತ್ತಿರ ಭೇಟಿಯಾಗಿರುತ್ತಾರೆ. ನಂತರ ಎದುರುದಾರರು ದೂರುದಾರರನ್ನು ಹಾಗೂ ಅವರ ಸ್ನೇಹಿತ ಹಾಗೂ ನೆರಳು ಸಾಕ್ಷಿ ಇವರುಗಳನ್ನು ವಸತಿ ಗೃಹಕ್ಕೆ ಕರೆದುಕೊಂಡು ಬಂದಾಗ, ದೂರುದಾರರು ತನ್ನ ಕೆಲಸದ ಬಗ್ಗೆ ಎದುರುದಾರರನ್ನು ವಿಚಾರಿಸಿದಾಗ ನೀವು ಅರ್ಜಿಯ ಜೆರಾಕ್ಸ್ ಕೊಡಿ, ಬೆಂಗಳೂರಿಗೆ ಹೋಗಿ ಮಾಡಿಸಿಕೊಂಡು ಬರುವುದಾಗಿ ಹೇಳಿ, ದೂರುದಾರರಿಂದ 2 ಲಕ್ಷ ರೂ.ಗಳನ್ನು ಬಲಗೈಯಿಂದ ಪಡೆದು, ಎರಡೂ ಕೈಗಳಿಂದ ಎಣಿಸಿ, ಅವರ ಬೆಡ್ ರೂಂ ಕೋಣೆಯ ಟೇಬಲ್ ಮೇಲೆ ಇಟ್ಟುಕೊಂಡಿರುತ್ತಾರೆ. ನಂತರ, ದೂರುದಾರರು ತಾವು ದರಿಸಿದ ಗಾಗಲ್ ತೆಗೆದು ಕರವಸ್ತ್ರದಿಂದ ಒರೆಸುವಂತೆ ಸನ್ನೆ ಮಾಡಿ ತನಿಖಾಧಿಕಾರಿಗೆ ಸೂಚನೆ ನೀಡಿರುತ್ತಾರೆ. ಸೂಚನೆಯನ್ನು ಅನುಸರಿಸಿ, ತನಿಖಾಧಿಕಾರಿಯವರು ಎದುರುದಾರರ ಬಳಿ ಬಂದು, ಅವರ ವಿರುದ್ದ ಪ್ರಕರಣ ದಾಖಲಾದ ಬಗ್ಗೆ ತಿಳಿಸಿ ತನಿಖೆ ಪ್ರಾರಂಭಿಸಿ, ತನಿಖಾಧಿಕಾರಿಯ ಸೂಚನೆ ಮೇರೆಗೆ, ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ, ತನಿಖಾಧಿಕಾರಿಯ ಸೂಚನೆ ಮೇರೆಗೆ, ಎದುರುದಾರರು ದೂರುದಾರರಿಂದ ಪಡೆದ ಲಂಚದ ಹಣ ಎರಡು ಲಕ್ಷ ರೂ.ಗಳನ್ನು ಹಾಜರುಪಡಿಸಿದಾಗ, ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚರು ಸದರಿ ಹಣದ ನಂಬರುಗಳನ್ನು ಮತ್ತು ಮೌಲ್ಯಗಳನ್ನು ಪರಿಶೀಲಿಸಿ ಅವುಗಳನ್ನು ವಹಿಸಿಕೊಡುವ ಪಂಚನಾಮೆ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡ ನಂತರ ತನಿಖಾಧಿಕಾರಿ ಸದರಿ ಲಂಚದ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರು

ದೂರುದಾರರಿಂದ ಲಂಚದ ಹಣ ಪಡೆದ ಸಂಬಂಧವಾಗಿ ಸಮಜಾಯಿಷಿಕೆಯನ್ನು ಕೊಡುವಂತೆ ಸೂಚಿಸಿದಾಗ ಎದುರುದಾರರು ತನ್ನ ಸಮಜಾಯಿಷಿಕೆಯನ್ನು ನೀಡಿದ್ದು ಅದರಲ್ಲಿ ... **"ದಿ: 13-04-2017 ರಂದು ನಿಸಾರ ಅಹ್ಮದ್ ಮಕಾಂದಾರ ಸಾ: ಮನಗೂಳಿ ಎಂಬುವರು ನನಗೆ ಪರಿಚಿತರು ಆಗಿದ್ದು ಅವರ ಬಳಿಯಲ್ಲಿ ನನ್ನ ವೈಯಕ್ತಿಕ ಹಣಕಾಸಿನ ತೊಂದರೆ ಇದ್ದ ಕಾರಣ, ಅವರ ಬಳಿಯಲ್ಲಿ ಎರಡು ಲಕ್ಷ ರೂ.ಗಳನ್ನು ಸಾಲವಾಗಿ ಕೇಳಿದ್ದು, ಸದರಿ ಹಣಕ್ಕೆ ಶೂರಿಟಿ ಆಗಿ ಅವರ ಪತ್ನಿಯ ಹೆಸರಿನಲ್ಲಿ ಇದ್ದ ಕಾರನ್ನು ಒತ್ತೆಯಾಗಿ ಇಡುವಂತೆ, ದಿ: 12-04-2017 ರಂದು ತೀರ್ಮಾನವಾಗಿದ್ದು, ಆದ ಪ್ರಯುಕ್ತ ದಿ: 13-04-2017 ರಂದು ಕೊಡುವುದಾಗಿ ಹೇಳಿದರು. ಅದರನ್ವಯ ಈ ದಿವಸ ಹಣವನ್ನು ತಂದು ತನ್ನ ಕ್ವಾರ್ಟಸ್ ನಲ್ಲಿ ಕೊಟ್ಟಾಗ, ತಾವು ಹಿಡಿದಿರುತ್ತೀರಿ".** ಎಂದು ಸಮಜಾಯಿಷಿಕೆ ನೀಡಿರುತ್ತಾರೆ. ಸದರಿ ಸಮಜಾಯಿಷಿಕೆ ಬಗ್ಗೆ ತನಿಖಾಧಿಕಾರಿ ದೂರುದಾರರ ಅಭಿಪ್ರಾಯ ಕೇಳಲಾಗಿ, ಎದುರುದಾರರು ಸುಳ್ಳು ಸಮಜಾಯಿಷಿಕೆಯನ್ನು ನೀಡಿರುತ್ತಾರೆಂದು ಹೇಳಿರುತ್ತಾರೆ. ತನಿಖಾಧಿಕಾರಿಯು ಕಾಲಕಾಲಕ್ಕೆ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ, ಈ ಸಂಬಂಧವಾಗಿ ತನಿಖಾಧಿಕಾರಿ ದಿ: 13-.04-2017 ರಂದು ಪಂಚರ ಸಮಕ್ಷಮ ಟ್ರಾಪ್ ಪಂಚನಾಮೆಯನ್ನು ಬರೆದಿರುತ್ತಾರೆ.

5). ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆಯಾಗಿರುತ್ತದೆಂದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ.

6). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ನಿಮ್ಮಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

7). ಎದುರುದಾರರು ತನ್ನ ವಿವರಣೆಯನ್ನು ದಿ: 23/8/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಕಂಡಿಕೆ 2 ರಲ್ಲಿ ದೂರುದಾರರು ತನ್ನ ವಿರುದ್ಧ ದಾಖಲಿಸಿರುವ ದೂರು ರಾಜಕೀಯ ಪ್ರೇರಿತ ಪಿತೂರಿಯಾಗಿರುತ್ತದೆ ಹಾಗೂ ಕಂಡಿಕೆ 3 ರಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುವ ವಿಷಯ ಪಾರದರ್ಶಕ ತೋರುವುದಿಲ್ಲ ಎಂದು ನಮೂದಿಸಿರುತ್ತಾರೆ. ಕಂಡಿಕೆ 4ರಲ್ಲಿ ಮೊ.ಸಂ: 6/2017ರಲ್ಲಿ ತನ್ನ ವಿರುದ್ಧ ಇರುವ ಆರೋಪಗಳು ಇನ್ನೂ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿವೆ. ನ್ಯಾಯಾಲಯದಲ್ಲಿ ನಾನು ಇನ್ನೂ ಅಪರಾಧಿ ಎಂದು ಸಾಭೀತು ಆಗಿರುವುದಿಲ್ಲ. ಆರೋಪ ಸಾಬೀತು ಆಗುವವರೆವಿಗೂ ಆರೋಪಿ ಅಷ್ಟೇ ಅಪರಾಧಿ ಅಲ್ಲ, ಕ್ರಮ ಕೈಗೊಳ್ಳಿ ಎಂಬ ವಿಷಯ ನೈಸರ್ಗಿಕ

ನ್ಯಾಯಕ್ಕೆ ವಿರುದ್ಧವಾಗಿರುತ್ತದೆ ಮತ್ತು ನನ್ನನ್ನು ಅಪರಾಧಿ ಎಂಬಂತೆ ಬಿಂಬಿಸುತ್ತಿದ್ದೀರಿ. ನ್ಯಾಯಾಲಯದಲ್ಲಿ ತನ್ನ ಪ್ರಕರಣ ವಿಚಾರಣೆಯಲ್ಲಿ ಇರುವಾಗ ಲೋಕಾಯುಕ್ತ ಕಾಯ್ದೆ ಅಡಿ ವಿಚಾರಣೆ ನಡೆಸಲು ಯಾವುದೇ ಅಧಿಕಾರವಿರುವುದಿಲ್ಲ. ಕಂಡಿಕೆ 5 ರಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಅಂಶಗಳು ಕಾನೂನು ವ್ಯಾಪ್ತಿಗೆ ಮೀರಿದ್ದು ಇರುತ್ತವೆ ಹಾಗೂ ಕಂಡಿಕೆ 6 ರಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 3 ರಲ್ಲಿ ಇರುವ ಆರೋಪಗಳು ಸುಳ್ಳು ಹಾಗೂ ಆಧಾರರಹಿತವಾದವು. ಕಂಡಿಕೆ 7 ರಲ್ಲಿ ತಾನು ಕರ್ನಾಟಕ ಗೃಹ ಮಂಡಳಿಯ ನೌಕರನಾಗಿದ್ದೇನೆಯೇ ಹೊರತು ಸರ್ಕಾರಿ ನೌಕರನಲ್ಲ ನಿಗಮ ಅಥವಾ ಸರ್ಕಾರ ರಚಿಸಿರುವ ಸೇವಕರು ಸರ್ಕಾರಿ ಸೇವಕರಲ್ಲ ಎಂದು ಕರ್ನಾಟಕ ಹೈಕೋರ್ಟ್ ಕೆಲವು ಪ್ರಕರಣಗಳಲ್ಲಿ ತೀರ್ಪು ನೀಡಿರುತ್ತದೆ, ಆಗಾಗಿ ತಾನು ಕರ್ನಾಟಕ ಗೃಹ ಮಂಡಳಿಯ ನೌಕರನಾಗಿರುವುದರಿಂದ ತನ್ನನ್ನು ವಿಚಾರಣೆ ಮಾಡಲು ಬರುವುದಿಲ್ಲ. ಕಂಡಿಕೆ 8ರಲ್ಲಿ ತನ್ನ ಸೇವೆ ದ್ವಿತಿಯ ದರ್ಜೆ ಕರ್ನಾಟಕ ಸಹಾಯಕ ಮಂಡಳಿಯ ಸೇವೆಯು ಸರ್ಕಾರಿ ನೌಕರ ಎನ್ನುವ ವ್ಯಾಖ್ಯೆನದಲ್ಲಿ ಬರುವುದಿಲ್ಲ. ಹಾಗೂ ತನ್ನ ಮೇಲೆ ನ್ಯಾಯಾಲಯದ ಕ್ರಮ ಕೈಗೊಳ್ಳಬಹುದೇ ಹೊರತು ಲೋಕಾಯುಕ್ತಕ್ಕೆ ಇರುವುದಿಲ್ಲ. ಸದರಿ ಪ್ರಕರಣವನ್ನು ತನ್ನ ಮೇಲೆ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಾರದು ಎಂದು ಹಾಗೂ ಕಂಡಿಕೆ 9ರಲ್ಲಿ ತನ್ನ ಮೇಲೆ ನ್ಯಾಯೋಚಿತ ಕ್ರಮಕ್ಕೆ ನೀಡಿರುವ ನೊಟೀಸು ಕಾನೂನು ಬಾಹಿರವಾಗಿರುವುದರಿಂದ, ತಾನು ನೀಡಿರುವ ವಿವರಣೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ನ್ಯಾಯಾಲಯದ ಕ್ರಮಾದೇಶ ಮಾಡಬಹುದೆಂದು ಹೊರತು ತಾವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿಚಾರಣೆ ಮಾಡಬಾರದಾಗಿ ಕೋರಿರುತ್ತಾರೆ. ಎದುರುದಾರರು ತಮ್ಮ ವಿವರಣೆಯಲ್ಲಿ ತಿಳಿಸಿರುವ ವಿಷಯಗಳಿಗೆ ಯಾವುದೇ ಹುರುಳಿರುವುದಿಲ್ಲ. ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದು ಇಲಾಖಾ ವಿಚಾರಣೆ ನಡೆಸುವುದಕ್ಕೆ ಯಾವುದೇ ಬಾಧಕವಾಗುವುದಿಲ್ಲ. ಈ ಬಗ್ಗೆ ಗೌ: ಸರ್ವೋಚ್ಚ ನ್ಯಾಯಾಲಯವು ಅನೇಕ ಪ್ರಕರಣಗಳಲ್ಲಿ ತೀರ್ಪು ನೀಡಿರುತ್ತದೆ. ಇಲಾಖಾ ವಿಚಾರಣೆ ಹೂಡುವುದು ಸಹಾ, ಎದುರುದಾರರ ವಿರುದ್ಧ ಆರೋಪ ಸಾಬೀತಾಗಿದೆಯೇ ಅಥವಾ ಇಲ್ಲವೇ ಎಂದು ಕಂಡುಕೊಳ್ಳಲು ಆಗಿರುತ್ತದೆಯೇ ವಿನಹ: ಎದುರುದಾರರನ್ನು ಈ ಹಂತದಲ್ಲಿ ಅಪರಾಧಿ ಎಂದು ಬಿಂಬಿಸಿರುವುದಿಲ್ಲ. ಗೃಹ ಮಂಡಳಿಯ ನೌಕರರೂ ಸಹಾ ಸಾರ್ವಜನಿಕ ನೌಕರರಾಗಿದ್ದು, ಅವರಿಗೂ ಸಹಾ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು ಅನ್ವಯವಾಗುವುದರಿಂದ, ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಬರುವುದಿಲ್ಲವೆಂಬ ಅವರ ವಾದವು ಸತ್ಯಕ್ಕೆ ದೂರವಾಗಿರುತ್ತದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 2(9)(vi) ಅಡಿಯಲ್ಲಿ ಎದುರುದಾರರು ಸಾರ್ವಜನಿಕ ನೌಕರರ ವಾಖ್ಯಾನದಡಿಯಲ್ಲಿ ಬರುತ್ತಾರೆ. ಆದರೆ, ಎದುರುದಾರರು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ ಅವರು ನೀಡಿರುವ ವಿವರಣೆಗಳ ಆಧಾರದ ಮೇಲೆ ಅವರ ವಿರುದ್ಧ ಪ್ರಕರಣವನ್ನು ಕೈಬಿಡಲು ಸೂಕ್ತ ಸಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಎದುರುದಾರರ ವಿರುದ್ಧ ದುರ್ನಡತೆಯು ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ದ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ / ಸಮಾಧಾನಕರ ಕಾರಣ ಇಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18.1.22

(ನ್ಯಾಯಮೂರ್ತಿ ಬಿ.ಎಸ್ ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು